Advt

# ಶಸ್ತ್ರಚಿಕಿತ್ಸೆ ಮೂಲಕ ತೂಕ ಇಳಿಸಿ ಗರ್ಭ ಧರಿಸಿ

ಸ್ಥೂಲಕಾಯ ಎನ್ನುವ ವ್ಯಾದಿಯು ಬಹಳಷ್ಟು ಕಾಯಿಲೆಗಳಿಗೆ ಮೂಲ. ಇಷ್ಟೇ ಏಕೆ ಬಹಳಷ್ಟು ಮಹಿಳೆಯರು ತಾಯಂದಿರಾಗಲೂ ಅತಿಯಾದ ದೇಹದ ತೂಕವೇ ಅಡ್ಡಿ ಎಂಬುದೂ ಅಷ್ಟೇ ಸತ್ಯ. ಬಂಜೆತನಕ್ಕೆ ಸ್ಥೂಲಕಾಯ ಬಹುಮುಖ್ಯ ಕಾರಣ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಗರ್ಭಧಾರಣೆಗೂ ಮುನ್ನ ತೂಕ ಇಳಿಸುವಂತೆ ಬಹಳಷ್ಟು ಮಹಿಳೆಯರಿಗೆ ವೈದ್ಯರು ತಿಳಿಸಿರುತ್ತಾರೆ. ಆದರೆ ಅದು ಅಷ್ಟು ಸುಲಭದ ಮಾತಲ್ಲ. ಆದರೆ ಈಗ ಅತ್ಯಾಧುನಿಕ ಶಸ್ತ್ರಚಿಕಿತ್ಸೆಯ ಮೂಲಕ ತೂಕ ಇಳಿಸಿಕೊಂಡು ಗರ್ಭಧರಿಸಬಹುದು.

ಮದುವೆಯಾಗಿ ಎಂಟು ವರ್ಷಗಳಿಂದ ನಿಖಿತಾ (ಹೆಸರು ಬದಲಿಸಲಾಗಿದೆ) ಗರ್ಭಧರಿಸಲು ಸಾಧ್ಯವಾಗಿರಲಿಲ್ಲ. ತನ್ನ ಓರಗೆಯ ಇತರ ಮಹಿಳೆಯರಂತೆ ತಾನೂ ಮುದ್ದಾದ ಮಗುವನ್ನು ಮಡಿಲಿನಲ್ಲಿ ಮಲಗಿಸಿಕೊಂಡು ಆಟವಾಡಿಸುವ ಭಾಗ್ಯ ಅವರಿಗೆ ಇರಲಿಲ್ಲ. 35 ವರ್ಷದ ಈ ಮಹಿಳೆಯ ಪತಿ ಸಾಕಷ್ಟು ಬಾರಿ ಪ್ರಯತ್ನಿಸಿದರೂ ಫಲ ಮಾತ್ರ ಧಕ್ಕಲಿಲ್ಲ. ಅತಿಯಾದ ದೇಹದ ತೂಕವನ್ನು ತಗ್ಗಿಸಲು ವೈದ್ಯರು ಸೂಚಿಸಿದರು.

ಸಾಮಾನ್ಯವಾಗಿ ಕಟ್ಟುನಿಟ್ಟಾದ ಆಹಾರ ಪದ್ಧತಿ ಹಾಗೂ ವ್ಯಾಯಾಮದಿಂದ ದೇಹದ ತೂಕವನ್ನು ಇಳಿಸಿಕೊಂಡು ಗರ್ಭಧರಿಸಲು ಸಾಧ್ಯವಿದೆ. ಆದರೆ ಮಿತಿಮೀರಿದ ದೇಹದ ತೂಕದ ಗಂಭೀರ ಸ್ಥಿತಿಯಲ್ಲಿರುವ ಮಹಿಳೆಯರಿಗೆ ನಿರ್ದಿಷ್ಟ ದಿನದೊಳಗೆ ನಿಗದಿತ ತೂಕ ಇಳಿಸುವುದು ಕಷ್ಟದ ಮಾತು. ಅದರಲ್ಲೂ ನಿಖಿತಾ ಅವರ ಬಾಡಿ ಮಾಸ್ ಇಂಡೆಕ್ಸ್(ಬಿಎಂಐ) 42ಕ್ಕಿಂತಲೂ ಹೆಚ್ಚಿತ್ತು. ಆ ಸಂದರ್ಭದಲ್ಲಿ ಅವರ ಎದುರು ಇದ್ದದ್ದು ತೂಕ ಇಳಿಸುವ ಶಸ್ತ್ರಚಿಕಿತ್ಸೆಯೊಂದೇ.

ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿರುವ ಫೋರ್ಟಿಸ್ ಆಸ್ಪತ್ರೆಯ ಬ್ಯಾರಿಯಾಟ್ರಿಕ್ ಶಸ್ತ್ರಚಿಕಿತ್ಸಕ ಡಾ.ಶಬೀರ್‌ಅಹ್ಮದ್‌ಅವರನ್ನು ನಿಖಿತಾ ಸಂಪರ್ಕಿಸಿದರು. ಶಸ್ತ್ರಚಿಕಿತ್ಸೆಗೂ ಒಳಪಟ್ಟರು. ಈ ಶಸ್ತ್ರಚಿಕಿತ್ಸೆಯ ಮೂಲಕ ಆಕೆ ಇಳಿಸಿಕೊಂಡಿದ್ದು ಬರೋಬ್ಬರಿ 45 ಕಿಲೋ. ಇದಾದ ಕೆಲವೇ ತಿಂಗಳುಗಳಲ್ಲಿ ಗರ್ಭಧರಿಸುವಲ್ಲಿ ನಿಖಿತಾ ಯಶಸ್ವಿಯಾದಳು. ಹಲವು ವರ್ಷಗಳು ಕಾದ ನಂತರ ಪೋಷಕರಾಗುವ ಭಾಗ್ಯ ನಿಖಿತಾ ಹಾಗೂ ಅವರ ಪತಿಯದ್ದಾಗಿತ್ತು.

## ಸ್ಥೂಲಕಾಯ ಹಾಗೂ ಬಂಜೆತನ

ಜಗತ್ತಿನಾದ್ಯಂತ ನಡೆದ ಸಾಕಷ್ಟು ಅಧ್ಯಯನಗಳ



ಪ್ರಕಾರ ಸ್ಥೂಲಕಾಯ ಹಾಗೂ ಬಂಜೆತನಕ್ಕೆ ನೇರ ಸಂಬಂಧವಿದೆ. ಸ್ಥೂಲಕಾಯ ಮಹಿಳೆ, ಅದರಲ್ಲೂ ಬಿಎಂಐ 35ರಿಂದ 40ರ ಆಸುಪಾಸಿನಲ್ಲಿರುವವರು ಗರ್ಭಧರಿಸುವ ಸಾಧ್ಯತೆ ತೀರಾ ಕಡಿಮೆ. ಒಂದೊಮ್ಮೆ ಗರ್ಭಧರಿಸಿದರೂ ಕೂಡಾ ಅದನ್ನು ಉಳಿಸಿಕೊಳ್ಳುವಲ್ಲಿ ವಿಫಲರಾಗುತ್ತಾರೆ.

'ಸ್ಥೂಲಕಾಯ ಎನ್ನುವುದು ಕೇವಲ ಬಂಜೆತನಕ್ಕಷ್ಟೇ ಕಾರಣವಾಗದೆ, ಮಧುಮೇಹ, ಹೈಪೋಥೈರಾಯ್ಡಿಸಂ, ಹೃದಯ ಸಂಬಂಧಿ ಕಾಯಿಲೆ ಸೇರಿದಂತೆ ಅನೇಕ ಕಾಯಿಲೆಗಳು ಕಾಡಬಹುದು. ಈ ಎಲ್ಲವೂ ಗರ್ಭಿಣಿಯಾಗಲು ಅಪಾಯ ತಂದೊಡ್ಡುವ ಸಮಸ್ಯೆಗಳೇ. ಅತಿಯಾದ ದೇಹದ ತೂಕದಿಂದ ಹಾರ್ಮೋನ್‌ಗಳು ಅನಿಯಮಿತವಾಗಿ ಅಸಮರ್ಪಕ ಸಂದೇಶಗಳನ್ನು ರವಾನಿಸುವ ಸಾಧ್ಯತೆ ಇದೆ. ಇದು ಅಂಡಾಶಯ ಹಾಗೂ ವೀರ್ಯಾಣುಗಳ ಉತ್ಪತ್ತಿ ಮೇಲೂ ಪರಿಣಾಮ ಬೀರಲಿದೆ. ಮಹಿಳೆಯರಲ್ಲಿ ಅತಿಯಾಗಿ ಇನ್ಸುಲಿನ್‌ಪ್ರಮಾಣ ಹೆಚ್ಚಿಸುವ ಹಾಗೂ ಪಾಲಿಸಿಸ್ಟಿಕ್ ಓವರಿಯನ್ ಸಿಂಡ್ರೋಮ್ (ಪಿಸಿಒಎಸ್) ಎಂಬ ಸಮಸ್ಯೆ ತಲೆದೋರಬಹುದು.

ಬಹಳಾ ವರ್ಷಗಳಿಂದ ಮಕ್ಕಳಾಗದೆ ಸಮಸ್ಯೆಯಲ್ಲಿರುವ ದಂಪತಿಗಳು, ತಮ್ಮ ತೂಕವನ್ನು ಇಳಿಸದ ಹೊರತು ಯಾವ



ರೀತಿಯ ಔಷಧ ಹಾಗೂ ಚಿಕಿತ್ಸೆ ಪಡೆದರೂ ಸಫಲತೆ ಕಾಣುವುದು ಕಷ್ಟ ಎಂದು ಡಾ.ಶಬೀರ್ ಅಹ್ಮದ್ ತಿಳಿಸುತ್ತಾರೆ.

ಡಾ.ಅಹ್ಮದ್‌ಅವರ ಪ್ರಕಾರ ಬಂಜೆತನ ನಿವಾರಣಾ ಆಸ್ಪತ್ರೆಗಳಿಗೆ ಭೇಟಿ ನೀಡುವ ಶೇ 40ರಿಂದ 50ರಷ್ಟು ಮಂದಿ ಸ್ಥೂಲಕಾಯದವರೇ. ಆದರೆ ಸಮಸ್ಯೆಯ ಮೂಲ ಅರಿಯದೇ ಬೇರೆ ಚಿಕಿತ್ಸೆ ಹಾಗೂ ಇತರ ಮಾರ್ಗೋಪಾಯಗಳಲ್ಲೇ ಕಾಲಹರಣ ಮಾಡುತ್ತಾರೆ. ಬಾರಿಯಾಟ್ರಿಕ್ ಶಸ್ತ್ರಚಿಕಿತ್ಸೆ ಹಾಗೂ ಬಂಜೆತನಕ್ಕೆ ಚಿಕಿತ್ಸೆಗಳನ್ನು ಜತೆಜತೆಯಾಗಿಯೇ ಪಡೆಯುವುದರಿಂದ ಯಶಸ್ವಿಯಾಗುವ ಸಾಧ್ಯತೆ ಹೆಚ್ಚಿರುತ್ತದೆ' ಎಂದು ಅವರು ತಿಳಿಸಿದರು.

ನಿಖಿತಾ ಅವರ ಪ್ರಕರಣದಲ್ಲಿ ಅವರ ಬಿಎಂಐ 42ಕ್ಕಿಂತಲೂ ಹೆಚ್ಚಿತ್ತು. ಜತೆಗೆ ಮಧುಮೇಹ ಕೂಡಾ ಅವರ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸಿತ್ತು. ಹೀಗಾಗಿ ಬರಿಯಾಟ್ರಿಕ್‌ಶಸ್ತ್ರಚಿಕಿತ್ಸೆಯೇ ಸೂಕ್ತ ಪರಿಹಾರ ಎಂದು ನಿರ್ಧರಿಸಿದೆವು. 'ಪ್ರಕರಣವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿದ ನಂತರ ಗ್ಯಾಸ್ಟ್ರಿಕ್‌ಬೈಪಾಸ್ ಶಸ್ತ್ರಚಿಕಿತ್ಸೆಯ ಮೂಲಕ ನಿಖಿತಾ 45 ಕಿಲೋ ತೂಕ ಇಳಿಸಿಕೊಳ್ಳಲು ಸಹಕಾರಿಯಾಯಿತು. ದೇಹದಲ್ಲಿನ ಸಕ್ಕರೆ ಅಂಶ ಕೂಡಾ ನಿಯಂತ್ರಣಕ್ಕೆ ಬಂತು. ಕೆಲವು ತಿಂಗಳ ನಂತರ ಆಕೆ ಗರ್ಭವತಿಯಾದರು. ಇದೊಂದು ದೀರ್ಘಕಾಲಿಕ ಪರಿಹಾರವಾಗಿರುವುದರಿಂದ ರೋಗಿಗಳು ಗರ್ಭಧರಿಸಿದ ನಂತರವೂ ತೂಕವನ್ನು ಕಾಪಾಡಿಕೊಳ್ಳಬಹುದು' ಎಂದು ಅವರು ತಿಳಿಸಿದರು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

ಫೋರ್ಟಿಸ್ ಆಸ್ಪತ್ರೆ, ನಂ. 154/9,
ಬನ್ನೇರುಘಟ್ಟರಸ್ತೆ, ಬೆಂಗಳೂರು–560076.
ದೂರವಾಣಿ ಸಂಖ್ಯೆ:
96633 67253/ 080-6621 4444.
ಇ–ಮೇಲ್:
care.bng@fortishealthcare.com